**ದಿಃ-24-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ ಃ**

15. ಅಕ್ಕಯ್ಯಮ್ಮ ನನ್ನ ಸಂಬಂಧಿಕರೂ ಅಲ್ಲ ಮತ್ತು ನಮ್ಮ ಜಾತಿಯವರು ಕೂಡ ಅಲ್ಲ. ಅವರು ತಮ್ಮ ಕುಟುಂಬದವರ ವಿರುದ್ಧ ವಿಭಾಗ ಕೋರಿ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಅದು ಮೂಲ ದಾವಾ ಸಂಖ್ಯೆ 2140/1982 ಆಗಿರುತ್ತದೆ. ಅವರು ಗೌಡರ ಅಣ್ಣಯ್ಯಪ್ಪನ ಮೇಲೆ ಈ ದಾವೆಯನ್ನು ಹೂಡಿರುತ್ತಾರೆ. ಅವರು ಅಕ್ಕಯ್ಯಮ್ಮನಿಗೆ ಮೈದುನನಾಗಬೇಕು.

16. ಅಕ್ಕಯ್ಯಮ್ಮನವರ ಗಂಡನ ಹೆಸರು ಹನುಮಂತಪ್ಪ. ಅಣ್ಣಯ್ಯಪ್ಪನವರು ಹನುಮಂತಪ್ಪನವರ ತಮ್ಮ ಎಂದರೆ ಸರಿ. ನಾನು ಮತ್ತು ನನ್ನ ಕುಟುಂಬ ಖರೀದಿಸಿದ ಸೈಟುಗಳ ನಂ.83 ರಿಂದ 86 ರವರೆಗೆ ಇರುತ್ತದೆ. ನಾವು ಒಟ್ಟು 8 ಸೈಟುಗಳನ್ನು ಖರೀದಿಸಿರುತ್ತೇವೆ.

17. ಸೈಟ್ ನಂ.83 ರ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸೈಟ್ ನಂ.84, ದಕ್ಷಿಣಕ್ಕೆ ಖಾಸಗಿ ಭೂಮಿ ಮತ್ತು ಉತ್ತರಕ್ಕೆ ಸೈಟ್ ನಂ.76 ಬರುತ್ತದೆ. ಇದು ನನ್ನ ತಾಯಿಯ ಹೆಸರಿನಲ್ಲಿದೆ. ಸೈಟ್ ನಂ.84 ಸಹ ನನ್ನ ತಾಯಿಯ ಹೆಸರಿನಲ್ಲಿದ್ದು ಅದನ್ನು ಒಂದೇ ಕ್ರಯ ಪತ್ರದಡಿ ಖರೀದಿ ಮಾಡಲಾಗಿರುತ್ತದೆ.

18. ಸೈಟ್ ನಂ.85 ಮತ್ತು 86ರ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಖಾಸಗಿ ಭೂಮಿ ಮತ್ತು ಉತ್ತರಕ್ಕೆ ಸೈಟ್ ನಂ.78 ಮತ್ತು 79 ಬರುತ್ತದೆ. ಇದು ನನ್ನ ತಂದೆ ಮಾದಯ್ಯನವರ ಹೆಸರಿನಲ್ಲಿದೆ. ಅದನ್ನು ಒಂದೇ ಕ್ರಯ ಪತ್ರದಡಿ ಖರೀದಿ ಮಾಡಲಾಗಿರುತ್ತದೆ.

19. ಸೈಟ್ ನಂ.10 ಮತ್ತು 18ರ ಚೆಕ್ಕುಬಂದಿ ನನಗೆ ನೆನಪಾಗುತ್ತಿಲ್ಲ. ಇದು ನನ್ನ ತಮ್ಮ ಸದಾಶಿವರವರ ಹೆಸರಿನಲ್ಲಿದೆ. ಅದನ್ನು 2 ಕ್ರಯ ಪತ್ರದಡಿ ಖರೀದಿ ಮಾಡಲಾಗಿರುತ್ತದೆ.

20. ಇನ್ನೆರದು ಸೈಟುಗಳು ನನ್ನ ಹೆಸರಿನಲ್ಲಿದ್ದು ಅದು ಈಗ ನನಗೆ ನೆನಪಿಲ್ಲ ಕಾರಣ ಅದನ್ನು ನಾನು ಈಗ ಬಿಟ್ಟು ಬಿಟ್ಟಿರುತ್ತೇನೆ. ಸಾಕ್ಷಿ ಮುಂದುವರಿದು ನನ್ನ ಕ್ರಯ ಪತ್ರಕ್ಕಿಂತ ಮೊದಲು ಬೇರೆ ಕ್ರಯ ಪತ್ರವಾದ್ದರಿಂದ ನಾನು ಅದನ್ನು ಬಿಟ್ಟಿರುತ್ತೇನೆ.

21. ನಾನು ಮೇಲೆ ಹೇಳಿದ ಸೈಟುಗಳನ್ನು ಖರೀದಿಸುವ ಮೊದಲು ಪ್ಲಾನನ್ನು ನೋಡಿರುತ್ತೇನೆ ಮತ್ತು ಉಳಿದ ನಾಲ್ಕು ಸೈಟುಗಳ ಕ್ರಯ ಪತ್ರಗಳನ್ನು ನೋಡಿರುತ್ತೇನೆ. ಅದರ ಖಾತಾಗಳನ್ನು ನೋಡಿರುವುದಿಲ್ಲ ಕಾರಣ ಅದು ನನ್ನ ಕ್ರಯ ಪತ್ರಕ್ಕಿಂತ ಮೊದಲೇ ಮಾರಾಟವಾದ್ದರಿಂದ ನನಗೆ ಅದರ ಖಾತೆಯನ್ನು ನೋಡುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ನಾಲ್ಕು ಸೈಟುಗಳನ್ನು ಅದರ ಮಾಲೀಕರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಅದನ್ನು ಯಾರಿಗೆ ಯಾವಾಗ ಮಾರಾಟ ಮಾಡಿದ್ದಾರೆ ಎಂದು ನನಗೆ

ಹೇಳಲಾಗುವುದಿಲ್ಲ. ನನಗೆ ಸ್ವತ್ತುಗಳನ್ನು ಮಾರುವ ಮೊದಲು ಬೇರೆಯವರಿಗೆ ಮಾರಿದ್ದರಿಂದ ನಾನು ಅವರ ಮೇಲೆ ಯಾವುದೇ ಕಾನೂನು ಕ್ರಮಗಳನ್ನು ಯಾ ದಾವೆಗಳನ್ನು ಹೂಡಿರುವುದಿಲ್ಲ ಕಾರಣ ನಾನು ಅದನ್ನು ಬಿಟ್ಟು ಬಿಟ್ಟಿರುತ್ತೇನೆ. ನಾವು ಬಿಟ್ಟ 4 ಸೈಟುಗಳ ಒಟ್ಟು ಕ್ರಯದ ಪ್ರತಿಫಲದ ಹಣ ಎಷ್ಟು ಎಂದು ನನಗೆ ಈಗ ನೆನಪಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**